ಹೆಚ್ಚುವರಿ ಭಾಗಕ್ಕೆ ನೆಲಗಟ್ಟಣೆ ಮಾಡುವುದು ಮುಂತಾದ ಕೆಲಸಗಳನ್ನು ಸಂಸ್ಥೆಯ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ನಿರ್ವಹಿಸಲು ಕ್ರಮ ಜರುಗಿಸಲಾಗುವುದು.

ರಾಜ್ಯದಲ್ಲಿ ಆಕ್ರಮ - ಸಕ್ರಮ ವಿದ್ಯುತ್ ಜೋಡಣೆಯಿಂದ ಬಂದ ಆದಾಯ

1591 (359) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಕ್ರಮ ಸಕ್ರಮ ವಿದ್ಯುತ್ ಜೋಡಣೆಯಿಂದ ಬಂದ ಆದಾಯವೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ವಿಶೇಷವಾಗಿ ಮುಖ್ಯ ಅಭಿಯಂತರು, ಕೆ.ಪಿ.ಟಿ.ಸಿ.ಎಲ್ ನವನಗರ, ಹುಬ್ಬಳ್ಳಿ ಕಛೇರಿಯ ವ್ಯಾಪ್ತಿಯಲ್ಲಿ ಬಂದ ಆದಾಯವೆಷ್ಟು (ಸಂಪೂರ್ಣ ವಿವರ ನೀಡುವುದು)?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಆಕ್ರಮ-ಸಕ್ರಮ ವಿದ್ಯುತ್ ಜೋಡಣೆಯಿಂದ ಬಂದ ಆದಾಯ ರೂ. 9287 ಲಕ್ಷಗಳು. ಜಿಲ್ಲಾವಾರು ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಕ್ರ.ಸಂ	ಜಿಲ್ಲೆ	ಮೊಬಲಗು (ಲಕ್ಷ ರೂ.ಗಳಲ್ಲಿ)
1.	ಬಾಗಲಕೋಟೆ	92.7699
2.	ಬೆಳಗಾಂ	1610.56154
3.	ಬಳ್ಳಾರಿ	356.80127
4.	ಬೀದರ್	245.44487
5.	ಬಿಜಾಪುರ	422
6.	ಬೆಂಗಳೂರು ಗ್ರಾಮೀಣ	485.39
7.	ಬೆಂಗಳೂರು ನಗರ	269.26376
8.	ಚಾಮರಾಜನಗರ	172.29
9.	ಚಿಕ್ಕಮಗಳೂರು	233
10.	ಚಿತ್ರದುರ್ಗ	452.15978
11.	ದಾವಣಗೆರೆ	758.86604
12.	ಧಾರವಾಡ	127.91029
13.	ದಕ್ಷಿಣ ಕನ್ನಡ	225.62346
14.	ಗದಗ	64.51846
15.	ಉಡುಪಿ	69.28
16.	ಗುಲ್ಬರ್ಗಾ	358.35
17.	ಹಾಸನ	340.17573
18.	ಹಾವೇರಿ	379.67041
19.	ಕೊಡಗು	5.63329
20.	ಕೋಲಾರ	436.77598

ಕ್ರ.ಸಂ	ಜಿಲ್ಲೆ	(ಲಕ್ಷ ರೂ.ಗಳಲ್ಲಿ)
21.	ಕೊಪ್ಪಳ	289.98718
22.	ಮಂಡ್ಯ	361.36976
23.	ಮೈಸೂರು	524.32397
24.	ರಾಯಚೂರು	411.15266
26.	ತುಮಕೂರು	211.17
27.	ಉತ್ತರ ಕನ್ನಡ	13.35998

ಆ) ಹುಬ್ಬಳ್ಳಿ ವಲಯದಿಂದ ಬಂದ ಆದಾಯ ರೂ. 2710.79 ಲಕ್ಷಗಳು. ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ	ಜಿಲ್ಲೆ	ಮೊಬಲಗು (ಲಕ್ಷ ರೂ.ಗಳಲ್ಲಿ)
1.	ಬಾಗಲಕೋಟೆ	92.7699
2.	ಬೆಳಗಾಂ	1610.5615
3.	ಬಿಜಾಪುರ	422.0000
4.	ಧಾರವಾಡ	1,27.9102
5.	ಗದಗ್	64.5184
6.	ಹಾವೇರಿ	379.6704
7.	ಉತ್ತರ ಕನ್ನಡ	13.3599

ರಾಜ್ಯದ ನಗರಪಾಲಿಕೆಗಳಲ್ಲಿ ಗಣಕೀಕರಣ

1594 (884) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರಪಾಲಿಕೆ, ಮಹಾನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರಗಳು ಗಣಕೀಕರಣಗೊಳಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಗಣಕೀಕರಣಗೊಳಿಸಿದ್ದಲ್ಲಿ ರಾಜ್ಯದಲ್ಲಿ ಎಷ್ಟು ನಗರಪಾಲಿಕೆ, ಮಹಾನಗರ ಪಾಲಿಕೆ ನಗರಾಭಿವೃದ್ಧಿ ಪ್ರಾಧಿಕಾರಗಳು, ಇಂಟರ್‌ನೆಟ್ ಸೇವಾ ಕಾರ್ಯಕ್ಕೊಳಪಟ್ಟಿವೆ ಪೂರ್ಣ ವಿವರ ನೀಡುವುದು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಸರ್ಕಾರದ ಗಮನದಲ್ಲಿದ್ದು ಈಗಾಗಲೇ ಸರ್ಕಾರ ಕಾರ್ಯಪ್ರವೃತ್ತವಾಗಿದೆ.

ಆ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಉಳಿದ, ರಾಜ್ಯದ ಯಾವುದೇ ಮಹಾನಗರ ಪಾಲಿಕೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು ಇಂಟರ್‌ನೆಟ್ ಸೇವಾ ಸೌಲಭ್ಯ ಹೊಂದಿರುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿದ ಅನುದಾನ

1595 (885) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?